**ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ   1903/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಮಾದಮ್ಮ | ಪ್ರಾ ಸಾಃ 3 |
| ತಂದೆಯ/ಗಂಡನ ಹೆಸರು | | ಮಹದೇವಪ್ಪ | ಚಾಸಾಃ 3 |
| ವಯಸ್ಸು | | 70 | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ಕಾರ್ಯ ಗ್ರಾಮ | ದಿಃ 06.11.2023 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮ ಪಕ್ಕದ ಮನೆಯವರಾಗಿದ್ದು , ಗ್ರಾಮದವರಾಗಿರುತ್ತಾರೆ. ಚಾಸಾ 1 ಮತ್ತು 2 ನನ್ನ ಮಕ್ಕಳು. ಸುಮಾರು 10 ವರ್ಷಗಳ ಹಿಂದೆ ನಾವು ಜಮೀನಿನಿಂದ ಸಂಜೆ 06.00 ಗಂಟೆಗೆ ಮನೆಗೆ ಬಂದೆವು. ಆಗ ನಾನು ಮನೆಯಲ್ಲಿದ್ದೆನು. ಆಗ ಆರೋಪಿತರು ಬಂದು ಗಲಾಟೆ ಮಾಡಿ 2 ನೇ ಆರೋಪಿ ಚಾಸಾ 1 ರವರನ್ನು ಕೆಡವಿಕೊಂಡು ಹೊಡೆದರು. 2 ಮತ್ತು 3 ನೇ ಆರೋಪಿತರು ಚಾಸಾ 1 ರವರನ್ನು ತಬ್ಬಿಡಿದುಕೊಂಡಿದ್ದು, 1 ನೇ ಆರೋಪಿ ಚಾಸಾ 1 ರವರಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಆಗ ಚಾಸಾ 2 ರವರು ಬಿಡಿಸಲು ಹೋದಾಗ 2 ನೇ ಆರೋಪಿ ಚಾಸಾ 2 ರವರಿಗೆ ಹೊಡೆದಿರುತ್ತಾರೆ. ನಾನು ಬಿಡಿಸಲು ಹೋದಾಗ 2 ನೇ ಆರೋಪಿ ನನ್ನ ಉಂಗುರದ ಬೆರಳಿಗೆ ಕಚ್ಚಿರುತ್ತಾರೆ. 4 ನೇ ಆರೋಪಿ ನನ್ನನ್ನು ತಳ್ಳಿ ಬೀಳಿಸಿರುತ್ತಾರೆ. ಆಗ ಚಾಸಾ 4, 5 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ಈ ಗಲಾಟೆಯು ನಮ್ಮ ಗ್ರಾಮದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಬಳಿ ನಡೆದಿರುತ್ತದೆ. ಈ ಕುರಿತು ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ**

ದಿನಾಂಕ 10.08.2014 ರಂದು ಸಂಜೆ 06.00 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಬಳಿ 1 ನೇ ಆರೋಪಿ ನಮ್ಮ ಮನೆಗೆ ಹೋಗುವ ರಸ್ತೆಗೆ ಅಡ್ಡಲಾಗಿ ಎತ್ತಿನ ಗಾಡಿ ನಿಲ್ಲಿಸಿದ್ದರ ಬಗ್ಗೆ ಚಾಸಾ 1 ರವರು ಕೇಳಿದಾಗ 1 ನೇ ಆರೋಪಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಶ್ರೀ ಆರ್ ಎನ್ ಎನ್ ವಕೀಲರಿಂದ ಆರೋಪಿ ಪರವಾಗಿಃ ಏನು ಇಲ್ಲಾ**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ಆಸ್ಪತ್ರೆಯಲ್ಲಿ ಪೊಲೀಸರ ಸಮಕ್ಷಮ ಹೇಳಿದ್ದೆನು. ಪೊಲೀಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ''ನಾನು ಮೇಲಿನಂತೆ ವ್ಯವಸಾಯ ಕಸಬು ಮಾಡಿಕೊಂಡು ಸಂಸಾರದೊಂದಿಗೆ ವಾಸವಿದ್ದು, ಈ ಕೇಸಿನ ಗಾಯಾಳುಗಳಾದ ಉಮೇಶ ಮತ್ತು ಗುರುಸಿದ್ದಪ್ಪ ನನಗೆ ಗೊತ್ತಿದ್ದು, ಸದರಿರವರು ನಮ್ಮ ಗ್ರಾಮದ ನಮ್ಮ ಜನಾಂಗದ ಮೃತ ಮಹದೇವಪ್ಪ ಮತ್ತು ಮಾದಮ್ಮರವರ ಮಕ್ಕಳಾಗಿದ್ದು, ನಮ್ಮ ಊರಿನ ವೀರ ಭದ್ರೇಶ್ವರ ದೇವಸ್ಥಾನದ ಹಿಂದೆ ಇವರು ಮನೆಯಿದ್ದು, ಅದರ ಪಕ್ಕದಲ್ಲಿ ಮಹದೇವಸ್ವಾಮಿ ಬಿನ್ ನಂಜುಂಡಸ್ವಾಮಿರವರ ಮನೆ ಇದ್ದು, ಮಹದೇವಸ್ವಾಮಿರವರ ಮನೆಯ ಹಿಂದೆ ಅಂದರೆ ದೇವಸ್ಥಾನದ ಪಕ್ಕ ಖಾಲಿ ಜಾಗ ಇದ್ದು, ಸದರಿ ಸ್ಥಳದಿಂದಲೇ ಉಮೇಶನ ಮನೆಯವರು ತಿರುಗಾಡುತ್ತಾರೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ." ಈ ಮೇಲ್ಕಂಡ ಹೇಳಿಕೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ತಿರುಗಾಡುವ ಜಾಗದ ಕುರಿತು ಮಹದೇವಸ್ವಾಮಿರವರ ಮನೆಯ ನಡುವೆ ಹಾಗೂ ಉಮೇಶರವರ ಮನೆಯ ನಡುವೆ ಗಲಾಟೆಯಾಗುತ್ತಿತ್ತು ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ತಿರುಗಾಡುವ ಜಾಗ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ತಿರುಗಾಡುವ ಜಾಗದ ವಿಸ್ತೀರ್ಣ ಗೊತ್ತಿಲ್ಲ. ಗಲಾಟೆ ನಡೆದ ಸಂದರ್ಭದಲ್ಲಿ ನಾನು ಹಾಗೂ ನನ್ನ ಮಕ್ಕಳಾದ ಚಾಸಾ 1 ಮತ್ತು 2 ಇದ್ದೆವು. ನಾನು ನನ್ನ

ಹೇಳಿಕೆಯಲ್ಲಿ ''ಈ ಗಲಾಟೆಯಲ್ಲಿ ಗುರುಸಿದ್ದಪ್ಪ ಹಾಗೂ ಆತನ ತಮ್ಮ ಉಮೇಶ ಹಾಗೂ ಅವರ ತಾಯಿ ಮಾದಮ್ಮರವರುಗಳು ತಮ್ಮನ್ನು ರಕ್ಷಣೆ ಮಾಡಿಕೊಳ್ಳುವಾಗ ತಳ್ಳಾಟ ನೂಕಾಟದಲ್ಲಿ ಮಹದೇವಸ್ವಾಮಿ ಹಾಗೂ ಅವರ ತಾಯಿ ಲೋಕೇಶ್ವರಿರವರು ಕೆಳಗೆ ಬಿದ್ದು, ಅವರಿಗೆ ತರಚಿದಂತೆ ಸ್ವಲ್ಪ ಗಾಯಗಳಾಗಿತ್ತೇ ವಿನಃ ಉಮೇಶನಿಗಾಗಲೀ ಅಥವಾ ಆತನ ಅಣ್ಣ ಗುರುಸಿದ್ದಪ್ಪರವರಿಗೆ ಆಗಲೀ ಹಾಗೂ ಅವರ ತಾಯಿ ಮಾದಮ್ಮಳಿಗಾಗಲೀ ಹಲ್ಲೆ ಮಾಡಿಲ್ಲ" ಎಂದು ಹೇಳಿರುತ್ತೇನೆ ಎಂದರೆ ಸರಿ. ಈ ಮೇಲ್ಕಂಡ ಹೇಳಿಕೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ಆರೋಪಿತರು ಚಾಸಾ 1 ಮತ್ತು 2 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆಯ ಕುರಿತು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸುವ ಸಲುವಾಗಿ ನಾನು ಚಾಸಾ 1 ಮತ್ತು 2 ರವರು ಆಸ್ಪತ್ರೆಗೆ ದಾಖಲಾಗಿದ್ದೆವು ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**